ಅಂಗಲಾಚಿದರೂ ಯಾರೂ ಬರಲಿಲ್ಲ. ಇವೆಲ್ಲ ಹೇಗಾಯಿತು... ಯಾಕಾಯಿತು... ಮುಂಚೆ ಇದ್ದ ಹಾಗೇ ನಾನು ಈಗಲೂ ಇದ್ದಿದ್ದಕ್ಕೆ ಈ ಪರಿಣಾಮಗಳೇ? ಇದಕ್ಕೆ ನಾನು ಅರ್ಹನೇ... ಎಂದು ಯೋಚಿಸುತ್ತಾ ಬಾಯಿ ಆ... ಮಾಡಿ, ಮೂಲೆಯಲ್ಲಿ ಕೂತರು, ಜೈಲಿನ ಕಪ್ಪುಹಿಡಿದ ಗೋಡೆಗಳನ್ನೇ ದಿಟ್ಟಿಸುತ್ತಾ. ಆ ಮಾಸಿದ ಗೋಡೆಯ ಮೇಲೆ ಗುಂಗುರು ಕೂದಲು, ಪ್ರಕಾಶಮಾನವಾದ ಚಿನ್ನದ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿರುವ ಗ್ರೀಕ್ ಲೋಕದ ಕಿನ್ನರ ಕಂಡ. ಅವನ ಕಣ್ಣುಗಳು ನೀಲಿ ವಜ್ರಗಳ ತೇಜಸ್ಸಿನಲ್ಲಿ ಉರಿಯುತ್ತಿದ್ದವು. ಪಾರಿವಾಳದ ಕಾಲುಗಳಂತೆ ಆತನ ಮೋರೆ ಆರೋಗ್ಯದ ಬೆಂಕಿಯಲ್ಲಿ ಶೋಭಿಸುತ್ತಾ ಇತ್ತು. ಸೂರ್ಯನಕುದುರೆಗಳು ಎಳೆಯುತ್ತಿದ್ದ ರಥವನ್ನು ಚಲಾಯಿಸುತ್ತಾ ಇದ್ದ ಈ ಬಾಲಕನ ಮೈಯನ್ನು ಶ್ವೇತ ಬಣ್ಣದ ನಿಲುವಂಗಿ ತಬ್ಬಿತ್ತು. ಆತ ಕರುಣಾಕರರನ್ನು ನೋಡಿ ಕಣ್ಣು ಮಿಟುಕಿಸಿ ವೇಗವಾಗಿ ತನ್ನ ಸಾರೋಟನ್ನು ಹಾರಿಸಿಕೊಂಡು ಮಾಯವಾದ.



ನನ್ನಿಂದಲೂ ಮುಚ್ಚಿಟ್ಟ ರಹಸ್ಯವೊಂದು, ನನ್ನದೇ ಕಣ್ತಪ್ಪಿಸಿ ಬಯಲಾಗಿದ್ದಕ್ಕೇ ನನಗೀ ಈ ಶಿಕ್ಷೆ...?

ಹೀಗೆಲ್ಲ ಆಗಿ, ಕೊನೆಗೆ ಏನೂ ಮಾಡಲು ತೋಚದೆ ಪ್ರೊಫೆಸರ್ ಸಾಹೇಬರು ಗೋಡೆಯ ಮೂಲೆಯಲ್ಲಿ ನಿಂತು ಮುಷ್ಟಿ ಮೈಥುನ ಮಾಡಿಕೊಂಡದ್ದು. ಆ ವಿಡಿಯೊ ಬೇರೆ ವೈರಲ್ ಆಯಿತು ಅವರ ಗ್ರಹಚಾರಕ್ಕೆ.

ಮೊನ್ನೆ ಬಂದ ಸುದ್ದಿಯ ಪ್ರಕಾರ ಆರ್‌ಕೆ ಸರ್ ತಮ್ಮ ಸೆಲ್ಲಿನಲ್ಲಿ ತಲೆ ಚಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದರಂತೆ. ಆದರೆ ತಕ್ಷಣ ಪಕ್ಕದಲ್ಲಿದ್ದ ಆ ಕಳಾಹೀನ ಖೈದಿ ಮಧ್ಯ ಪ್ರವೇಶಿಸಿದ್ದರಿಂದ ಬಚಾವಾದರಂತೆ. ಆ ನಂತರ ಗವರ್ನ್‌ಮೆಂಟ್ ಹಾಸ್ಪಿಟಲ್ಲಿಗೆ ಇವರನ್ನು ರವಾನಿಸಿ, ಅಲ್ಲಿ ಇವರ ಬುಂಡೆಗೆ ಸ್ಟಿಚ್ ಹಾಕಿಸಿ ಇದೇ ಜೈಲಿನ ಕೋಣೆಗೆ ಶಿಫ್ಟ್ ಮಾಡಿದ್ದಾಯಿತಂತೆ. ಮತ್ತೆ ಆತ್ಮಹತ್ಯೆ ಮಾಡಿಕೊಂಡರೆ ಆಪತ್ತು ಅಂತ ಇವರ ಕೈಗಳನ್ನು ಈಗ ಸರಪಳಿಯಲ್ಲಿ ಕಟ್ಟಿದ್ದಾರೆ. ನೀವೇನಾದರೂ ಶ್ರೀಯುತರನ್ನು ಈಗ ನೋಡಿದರೆ forever young and elegant, super Daddy cool Prof RKಯೇ ಈ ಕಂಗೆಟ್ಟ ಕಂಗಳ, ಕೃಶ ಶರೀರದ ವ್ಯಕ್ತಿ ಎಂದು ಹೇಳಲು ಖಂಡಿತಾ ಸಾಧ್ಯವಿಲ್ಲ... ಈಗ ಇವರು ಸ್ತಬ್ಧಚಿತ್ರದಂತೆ... ಯಾರಲ್ಲೂ ಏನೂ ಮಾತೇ ಆಡುವುದಿಲ್ಲ... ಇವರನ್ನು ನೋಡಲು ಯಾರಾದರೂ ಬರುವುದೂ ಕಡಿಮೆಯೇ ಬಿಡಿ. ಕೆನಡಾದಿಂದ ಮಗ ಒಂದು ದಿನ ಬಂದಿದ್ದ... ಹೇಗಾದರೂ ಮಾಡಿ ಇವರ ಲ್ಯಾಂಡನ್ನೆಲ್ಲ ಆತ ಮಾರಲು ಪ್ಲಾನ್ ಮಾಡಿದ್ದ. ಇಲ್ಲದಿದ್ದರೆ ಗುಟ್ಟಾಗಿ ಇವರು ಆ ಜಾಗವನ್ನೆಲ್ಲ ಮಾರಿ ಆ ಹಣವನ್ನು ಈ ಮುಗಿಯದ ಕಾನೂನಿನ ಚಕ್ರವ್ಯೂಹದಲ್ಲಿ ಸ್ವಾಹ ಮಾಡಿದರೆ... ಎಷ್ಟೆಲ್ಲ ನ್ಯಾಷನಲ್ ವೇಸ್ಟ್ ಆಗುತ್ತದಲ್ಲ ಅನ್ನುವುದು ಆತನ ಉವಾಚ. ಆತ ಬಂದಾಗ ಇವರು ಮಗುಮ್ಮಾಗಿ ಇದ್ದವರು ಇದ್ದಕ್ಕಿದ್ದಂತೆ, 'I tried to show something beautiful...' ಅಂತ ಉಸುರಿದರಂತೆ. ಮತ್ತೆ ಆ ವ್ಯವಹಾರ ಏನಾಯಿತು... ಅದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ.

ಹಾಗೇ ಮತ್ತೆ ಐಪಿಎಲ್, ಫಿಲ್ಮ್ ಫೆಸ್ಟಿವಲ್, ನೆಟ್‌ಫ್ಲಿಕ್ಸ್ ಹೊಸ ಸಿರೀಸ್, ಮಕ್ಕಳ ಪರೀಕ್ಷೆಗಳೆಲ್ಲ ಮುಗಿದು ಕಾಶ್ಮೀರ, ಲೇಹ್, ಕಾಶಿ ಕಡೆ ಸುತ್ತೋ ಸೀಸನ್ ಇತ್ಯಾದಿ, ಇತ್ಯಾದಿಗಳೆಲ್ಲ ಶುರು ಆಗಿದ್ದರಿಂದ ಎಲ್ಲ ಬದಿಗಳ ಜನರೂ ಈಗ ಜೀವನ್ಮುಖಿಗಳಾಗಿ, ಈ ವಿಷಯಗಳತ್ತ ಗಮನ ಹರಿಸುತ್ತಾ ಈ ಕ್ಷಣವನ್ನು ಹೇಗೆ ನಾವೆಲ್ಲ ವಿಭಿನ್ನವಾಗಿ ಜಾಲಿಯಾಗಿ ಕಳೆಯುತ್ತಾ ಇದ್ದೇವೆ ಅಂತ ಹರಟುತ್ತಾ, ತಾವು ನೋಡಿದ ಹೊಸ ಚಿತ್ರಗಳ ಬಗ್ಗೆ ಪೋಸ್ಟ್ ಹಾಕಿ, ಆ ವಿಮರ್ಶೆಗಳ ವಿಮರ್ಶೆ ಮಾಡಿದವರ ಜತೆ ಜಾಲತಾಣಗಳಲ್ಲಿ ಕಚ್ಚಾಡುತ್ತಾ ಕಾಲ ಕಳೆಯುತ್ತಿದ್ದಾರೆ.

ಪ್ರೊಫೆಸರ್ ಆರ್‌ಕೆ ಸಾಹೇಬರ ಮಾಜಿ ಪತ್ನಿ, ಈ ವರ್ಷಾಂತ್ಯದಲ್ಲಿ ಬರೆದ "My marriage with a closet Pedagogical Paedophile- A Memoir" ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ.

●